REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 14 । ಜುಲೈ 12, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ದಾಖಲೆಯ 14ನೇ ಬಜೆಟ್ ಮಂಡನೆ :

# ಐದು ಗ್ಯಾರಂಟಿ ಯೋಜನೆಗಳಿಗೆ ರೂ. 52,000 ಕೋಟಿ ವೆಚ್ಚವಾಗಲಿದೆ : ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ



**ಬೆಂಗಳೂರು** : 14ನೇ ಬಾರಿಗೆ ದಾಖಲೆಯ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು, ತಮ್ಮ ಪಕ್ಷ ಜನರಿಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಈಡೇರಿಸಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಕೇವಲ ಬಿಟ್ಟಿ ಕೊಡುಗೆಗಳೆಂದು ಹೇಳುವವರು ಒಮ್ಮೆ ನಮ್ಮ ಬಡವರು, ಶ್ರಮಿಕರ ಬದುಕನ್ನು ಗಮನಿಸಬೇಕಾಗಿದೆ. ನಮ್ಮ ಐದು ಗ್ಯಾರಂಟಿಗಳ ಬಗ್ಗೆ ಟೀಕೆ ಮಾಡುವುದು, ಸುಳ್ಳು ಸುದ್ದಿಗಳನ್ನು ಹಬ್ಬಿಸುವುದು ಸೇರಿದಂತೆ ಗೊಂದಲ ಮೂಡಿಸುವ ಕೆಲಸಗಳನ್ನು ಮಾಡುತ್ತಿರುವವರಿಗೆ ಶ್ರೀಸಾಮಾನ್ಯರಿಗೆ ಅಪಮಾನ ಮಾಡಬೇಡಿ ಎಂದು ವಿನಂತಿಸಿದ್ದಾರೆ.

ಮುಖ್ಯಮಂತ್ರಿಗಳು ಸರ್ಕಾರದ ಐದು ಪ್ರಮುಖ ಚುನಾವಣಾ ಯೋಜನೆಗಳಿಗಾಗಿ ವಾರ್ಷಿಕವಾಗಿ ಅಂದಾಜು 52,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು ಮತ್ತು 1.3 ಕೋಟಿ ಕುಟುಂಬಗಳಿಗೆ ಇದರಿಂದ ಪ್ರಯೋಜನವಾಗಲಿದೆ ಎಂದು ಬಜೆಟ್‌ನಲ್ಲಿ ಹೇಳಿದ್ದಾರೆ. ಐದು ಖಾತರಿಗಳ ಮೂಲಕ ಸರ್ಕಾರವು ಪ್ರತಿ ಕುಟುಂಬಕ್ಕೆ ತಿಂಗಳಿಗೆ ಸರಾಸರಿ ನಾಲ್ಕು ಸಾವಿರದಿಂದ ಐದು ಸಾವಿರ ರೂಪಾಯಿಗಳ ಹೆಚ್ಚುವರಿ ಆರ್ಥಿಕ ನೆರವನ್ನು ನೀಡುತ್ತದೆ. ಇದು ವಾರ್ಷಿಕವಾಗಿ ಸರಾಸರಿ 48,000 ದಿಂದ 60,000 ರೂ.ಗಳಷ್ಟು ಆಗುತ್ತದೆ. ಇದು ಸಾರ್ವತ್ರಿಕ ಮೂಲ ಆದಾಯ ಎಂಬ ಪರಿಕಲ್ಪನೆಯನ್ನು ದೇಶದಲ್ಲಿಯೇ ಪ್ರಥಮ ಬಾರಿಗೆ ಅನುಷ್ಠಾನಗೊಳಿಸಿ ಅಭಿವೃದ್ಧಿಯ ಹೊಸ ಮಾದರಿಯನ್ನು ರೂಪಿಸುವ ಉದ್ದೇಶ ಹೊಂದಿದೆ ಎಂದು ಹೇಳಿದ್ದಾರೆ.

ಗ್ಯಾರಂಟಿ ಯೋಜನೆಗಳಿಗೆ ಅಗತ್ಯವಿರುವ ಸಂಪನ್ಮೂಲವನ್ನು ನಮ್ಮ ಸರ್ಕಾರವು ಜನರಿಗೆ ಹೆಚ್ಚಿನ ಹೊರೆಯಾಗದಂತೆ ಹೊಂದಿಸಲಿದೆ. ಈ ನಿಟ್ಟಿನಲ್ಲಿ ತೆರಿಗೆ ಸಂಗ್ರಹ ವ್ಯವಸ್ಥೆಯಲ್ಲಿ ಸುಧಾರಣೆ ಹಾಗೂ ತೆರಿಗೆ ಸೋರಿಕೆಯನ್ನು ತಡೆಗಟ್ಟುವುದರ ಜೊತೆಗೆ ಸರ್ಕಾರದ ಅನಗತ್ಯ ದುಂದುವೆಚ್ಚಗಳಿಗೆ ಕಡಿವಾಣ ಹಾಕಲು ಕ್ರಮ ವಹಿಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಗ್ಯಾರಂಟಿ ಜಾರಿ ನಡುವೆ 238.4 ಸಾವಿರ ಕೋಟಿ ರೂಪಾಯಿಗಳ ಒಟ್ಟು ಆದಾಯದ ಸ್ವೀಕೃತಿಗಳೊಂದಿಗೆ ಬಜೆಟ್ ಅನ್ನು ಮಂಡಿಸುವಾಗ, ಅದರಲ್ಲಿ ಶೇಕಡಾ 73.7 ಸ್ವಂತ ತೆರಿಗೆಯ ಪ್ರಯತ್ನಗಳಿಂದ ಮತ್ತು 5.24 ಶೇಕಡಾ ತೆರಿಗೆಯೇತರ ಆದಾಯದಿಂದ ಬಂದಿದೆ. ರಾಜ್ಯದ ಸ್ವಂತ ತೆರಿಗೆಯಿಂದ 11 ಸಾವಿರ ಕೋಟಿ ಹೆಚ್ಚುವರಿ ಆದಾಯವನ್ನು ಒಳಗೊಂಡಿದೆ (ರೂ. 1,64,652 ಕೋಟಿ ಬಿಇ ವಿರುದ್ಧ ರೂ. 1,75,652 ಕೋಟಿ) ಮತ್ತು ತೆರಿಗೆಯೇತರ ಆದಾಯದಿಂದ 1,500 ಕೋಟಿ ರೂಪಾಯಿ ಬಜೆಟ್ ತನ್ನ ಸ್ವಂತ ತೆರಿಗೆ ಆದಾಯದ ಮೇಲೆ ಹೆಚ್ಚು

3ನೇ ಪುಟಕ್ಕೆ...

2 ದೇಶದಲ್ಲಿ ಗೃಹ ಸಾಲದ ಪ್ರಮಾಣ ಶೇ.14.2ಕ್ಕೆ ಹೆಚ್ಚಳ
4 ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ : ಹೊಸ ಶಾಖೆಗಳ ಉದ್ಘಾಟನೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...



# ಸಾರ್ವತ್ರಿಕ ಮೂಲ ಆದಾಯ ಜಾರಿ; ಕಲ್ಯಾಣ ರಾಜ್ಯದ ಪರಿಕಲ್ಪನೆಯ ಹಾದಿ

ಮುಖ್ಯವಾಗಿ ಬಜೆಟ್ ಅಂದರೆ ಉತ್ಪಾದನೆ ಮತ್ತು ಹಂಚಿಕೆ. ಕಾಯಕ ಅಂದರೆ ಉತ್ಪಾದಿಸುವುದು ಅದನ್ನು ದಾಸೋಹ ಮೂಲಕ ಅರ್ಹರಿಗೆ ಹಂಚುವುದು. ಉತ್ಪಾದನೆಯಿಂದ ಆದಾಯ ಬರುತ್ತದೆ ಅದರಲ್ಲಿ ಒಂದು ಭಾಗವನ್ನು ದಾಸೋಹದ ಮೂಲಕ ಸಮಾಜದ ಅರ್ಹರಿಗೆ ಹಂಚಬೇಕು. ಹಿಂದೆ ಹಿರಿಯರು ಹಂಚಿ ತಿನ್ನುವುದರಲ್ಲಿ ಸುಖ, ಸಂತೋಷವಿದೆ ಎನ್ನುತ್ತಿದ್ದನ್ನು ನೀವೆಲ್ಲರೂ ಕೇಳಿಯೇ ಇರುವಿರಿ. ಇದು ನಮ್ಮ ಬಸವಣ್ಣನವರು 12ನೇ ಶತಮಾನದಲ್ಲೇ ಹಾಕಿ ಕೊಟ್ಟ ಹಾದಿ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಈ ಹಾದಿಯಲ್ಲಿ ನಡೆದಿದೆ.

ಮೊನ್ನೆ ಮುಖ್ಯಮಂತ್ರಿಗಳು ಮಂಡಿಸಿದ ಬಜೆಟನ್ನು ಒಮ್ಮೆ ಅವಲೋಕಿಸಿದಾಗ ಎದ್ದು ಕಾಣುವುದು ಇದೇ ಕಲ್ಯಾಣ ರಾಜ್ಯದ ಪರಿಕಲ್ಪನೆಯಾಗಿದೆ. ನಮ್ಮ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಯೂನಿವರ್ಸಲ್ ಬೇಸಿಕ್ ಇನ್‌ಕಂ ಅಂದರೆ, ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯನ್ನು ಅವರು ಜಾರಿಗೊಳಿಸಿದ್ದಾರೆ. ಬಜೆಟ್ ಮುನ್ನ ದಿನಗಳಲ್ಲೇ ಮುಖ್ಯಮಂತ್ರಿಗಳು ದೇಶಕ್ಕೆ ಕರ್ನಾಟಕದ ಮಾದರಿಯೊಂದನ್ನು ಹಾಕಿಕೊಡುವುದಾಗಿ ಹೇಳಿದ್ದರು. ಅದರಂತೆ ಮಾಡಿ ತೋರಿಸಿದ್ದಾರೆ. ಈಗ ದೇಶದ ಎಲ್ಲಾ ರಾಜ್ಯಗಳು ಕರ್ನಾಟಕದತ್ತ ತಿರುಗಿ ನೋಡುವಂತೆ ಮಾಡಿದ್ದಾರೆ.

ಐದು ಗ್ಯಾರಂಟಿಗಳ ಜಾರಿಯಿಂದಾಗಿ ರಾಜ್ಯದ ಕೋಟ್ಯಂತರ ಆರ್ಥಿಕ ಅಬಲರ ಕುಟುಂಬಗಳಿಗೆ ಮಾಸಿಕ 4 ಸಾವಿರದಿಂದ 5 ಸಾವಿರ ರೂಪಾಯಿ ಸಹಾಯ ದೊರೆತಿದೆ. ದೇಶದ ಹಾಗೂ ರಾಜ್ಯದ ಶೇ.60 ಹೆಚ್ಚು ತೆರಿಗೆ ಸಂಗ್ರಹವಾಗುವುದೇ ಈ ವರ್ಗದ ಜನರಿಂದ. ವಿಪರ್ಯಾಸವೆಂದರೆ, ಅದರ ಅನುಕೂಲ, ಲಾಭ ಪಡೆದುಕೊಳ್ಳುತ್ತಿರುವುದು ಕೆಲವೇ ಕೆಲವು ಸಿರಿವಂತ ಉದ್ಯಮಿ ಕುಟುಂಬಗಳಾಗಿವೆ. ಇದನ್ನು ತಪ್ಪಿಸಿ ಯಾರಿಂದ ಸಂಪತ್ತು ಉತ್ಪಾದನೆಯಾಗುತ್ತಿದೆಯೋ ಅವರಿಗೆ ಅದರಲ್ಲಿ ಒಂದು ಭಾಗ ಹಂಚಿಕೆ ಮಾಡುವುದೇ ಸಾರ್ವತ್ರಿಕ ಮೂಲ ಆದಾಯ ಪರಿಕಲ್ಪನೆಯಾಗಿದೆ. ಇದು ಒಂದು ರೀತಿಯಲ್ಲಿ ದಾಸರು ಹೇಳಿದ ಹಾಗೆ, ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಅಂದರೆ ವರಮಾನ ಪಡೆಯುವುದಾಗಿದೆ.

ಮಹಿಳೆಯರಿಗೆ ಸಾರಿಗೆಯಲ್ಲಿ ಉಚಿತ ಸವಲತ್ತು ನೀಡುವುದು, ಪದವೀಧರ ನಿರುದ್ಯೋಗಿಗಳಿಗೆ ಭತ್ಯೆ ನೀಡುವುದು, ಆರ್ಥಿಕ ದುರ್ಬಲ ವರ್ಗದ ಕುಟುಂಬಗಳಿಗೆ ಆಹಾರ ಭದ್ರತೆ, ಆರೋಗ್ಯ, ವಸತಿ, ಶಿಕ್ಷಣ ನೀಡುವುದು ಯಾವುದೇ ಚುನಾಯಿತವಾದ ಸರ್ಕಾರದ ಜವಾಬ್ದಾರಿ ಎನ್ನುವುದನ್ನು ನಾನು ಈ ಹಿಂದೆಯೇ ಹೇಳಿದ್ದೇನೆ.

ಸಿರಿವಂತರಿಗೆ ತೆರಿಗೆ ವಿನಾಯಿತಿ, ಅವರ ಬ್ಯಾಂಕ್ ಸಾಲ ಮನ್ನಾ ಮಾಡುವುದರಿಂದ, ಅವರು ತಮ್ಮ ಬಳಿ ಉಳಿದ ಆ ಹಣವನ್ನು ಮತ್ತೊಂದು ಕಡೆ ಹೂಡಿಕೆ ಮಾಡಿ ಮತ್ತೂ ಸಿರಿವಂತರಾಗುತ್ತಾರೆಯೇ ಹೊರತು, ಅದರಿಂದ ದೇಶದ ಆರ್ಥಿಕತೆಗೆ ಯಾವುದೇ ಲಾಭವಿಲ್ಲ. ಅದೇ ದುರ್ಬಲ ವರ್ಗದವರಿಗೆ ಕೆಲ ಸವಲತ್ತುಗಳು ನೀಡಿದರೆ, ಅವರು ತಮ್ಮ ಬಳಿ ಉಳಿದ ಹಣವನ್ನು ಕುಟುಂಬದ ಅಗತ್ಯಗಳಿಗಾಗಿ ಬಳಸುತ್ತಾರೆ. ಹೀಗೆ ಅದು ಮತ್ತೆ ಮಾರುಕಟ್ಟೆಗೆ ಹರಿದು ಬರುತ್ತದೆ; ಆರ್ಥಿಕ ಚಕ್ರ ತಿರುಗುತ್ತದೆ. ನೋಡುತ್ತಿರಿ, ಮುಂದಿನ ದಿನಗಳಲ್ಲಿ ರಾಜ್ಯದ ತೆರಿಗೆ ಸಂಗ್ರಹ ಹೆಚ್ಚಾಗುವ ಸಂಭವವಿದೆ ಎಂದು ನಾನು ದೃಢ ವಿಶ್ವಾಸದಿಂದ ಹೇಳಬಯಸುತ್ತೇನೆ.

▶▶ ಎಚ್.ಕೆ. ಪಾಟೀಲ್

# ದೇಶದಲ್ಲಿ ಗೃಹ ಸಾಲದ ಪ್ರಮಾಣ ಶೇ.14.2ಕ್ಕೆ ಹೆಚ್ಚಳ

**ಹೊಸದಿಲ್ಲಿ :** ವಸತಿ ಗೃಹಗಳ ಸಾಲದ ಪ್ರಮಾಣದಲ್ಲಿ ಕಳೆದ 11 ವರ್ಷದಲ್ಲಿ ಗಣನೀಯ ಏರಿಕೆ ಕಂಡಿದ್ದು, ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಆರೋಗ್ಯಕರ ಬೆಳವಣಿಗೆಗೆ ದಾರಿಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಹಣಕಾಸು ಸ್ಥಿರತೆ ವರದಿ (ಎಫ್‌ಎಸ್‌ಆರ್) ಹೇಳಿದೆ. 2023ರಲ್ಲಿ ಒಟ್ಟು ಸಾಲದ ಪ್ರಮಾಣದಲ್ಲಿ ವಸತಿ ಗೃಹಗಳ ಸಾಲದ ಪ್ರಮಾಣ ಶೇ.14.2ಕ್ಕೆ ಹೆಚ್ಚಿದೆ. 2012ರಲ್ಲಿ 8.6ರಷ್ಟಿದ್ದ ಸಾಲದ ಪಾಲು 11 ವರ್ಷದಲ್ಲಿ ಶೇ.7.6ರಷ್ಟು ಹೆಚ್ಚಳವಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣ ವಲಯದಲ್ಲಿ ದೊಡ್ಡಮಟ್ಟದ ಚೇತರಿಕೆ ಕಂಡು ಬಂದಿದೆ.



ನಾಲ್ಕನೇ ತ್ರೈಮಾಸಿಕದಲ್ಲಿ ಮಾರಾಟ ಪ್ರಮಾಣ ಶೇ.21.6ರಷ್ಟು ಏರಿಕೆಯಾಗಿದೆ. ಹೊಸ ಯೋಜನೆಗಳ ಲೋಕಾರ್ಪಣೆ, ಮಾರಾಟದ ಹೆಚ್ಚಳದಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮತ್ತಷ್ಟು ಬಲ ಸಿಕ್ಕಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದರೂ 2022–23ನೇ ಆರ್ಥಿಕ ವರ್ಷದಲ್ಲಿ ವಾಣಿಜ್ಯ ರಿಯಲ್ ಎಸ್ಟೇಟ್ ಉದ್ಯಮದ ಸಾಲದ ಪಾಲು ಕೇವಲ ಶೇ.2.0 ರಿಂದ ಶೇ.2.9ರಷ್ಟಿದೆ. ಬ್ಯಾಂಕ್‌ಗಳು ನೀಡಿದ ಸಾಲದ ಪ್ರಮಾಣ ಶೇ.16.5ರಷ್ಟು ಮಾತ್ರವಾಗಿದೆ ಎಂದು ವರದಿಯಲ್ಲಿ ತಿಳಿಸಿದೆ.

**ಏಳು ತ್ರೈಮಾಸಿಕ ಏರಿಕೆ :** ಆರ್‌ಬಿಐ ಪ್ರಕಾರ 2023ರ ಮಾರ್ಚ್‌ವರೆಗೆ ಗೃಹ ಸಾಲದ ಮೊತ್ತ 19.36ಲಕ್ಷ ಕೋಟಿ ರೂ.ಗಳಾಗಿದೆ. ವರ್ಷದಿಂದ ವರ್ಷಕ್ಕೆ ಈ ಪ್ರಮಾಣ ಶೇ.15ರಷ್ಟು ಹೆಚ್ಚಳವಾಗುತ್ತಿದೆ. ಕಳೆದ ಏಳು ತ್ರೈಮಾಸಿಕ ಅವಧಿಯಲ್ಲಿ ಗೃಹ ಬೆಲೆ ಸೂಚ್ಯಂಕ (ಎಚ್‌ಪಿಐ) ಶೇ.4.6ರಷ್ಟು ಹೆಚ್ಚಿದೆ ಎಂದು ಎಫ್‌ಎಸ್‌ಆರ್ ವರದಿಯಲ್ಲಿ ಹೇಳಲಾಗಿದೆ. 2022–23ನೇ ಆರ್ಥಿಕ ವರ್ಷದ ತ್ರೈಮಾಸಿಕ ಅವಧಿಯಲ್ಲಿ ಮನೆಗಳ ಮಾರಾಟ ಪ್ರಮಾಣ 21.6ರಷ್ಟು ಹೆಚ್ಚಳವಾಗಿದೆ ಎಂದು ವರದಿ ಹೇಳಿದೆ.

...1ನೇ ಪುಟದಿಂದ



ಅವಲಂಬಿತವಾಗಿದೆ. ಗ್ಯಾರಂಟಿ ಯೋಜನೆಗಳಿಗೆ ಸರ್ಕಾರಕ್ಕೆ ಆಗುವ ಹೆಚ್ಚುವರಿ ಆರ್ಥಿಕ ಹೊರೆಯನ್ನು ಸಮದೂಗಿಸಲು ಮುಖ್ಯಮಂತ್ರಿಗಳು ಆದಾಯವನ್ನು ಗಳಿಸಲು ಅಬಕಾರಿ ಮತ್ತು ಅಂಚೆಚೀಟಿಗಳು ಮತ್ತು ನೋಂದಣಿ ಶುಲ್ಕವನ್ನು ಆಯ್ಕೆ ಮಾಡಿದ್ದಾರೆ. ಅಬಕಾರಿ ಸುಂಕ (36,000 ಕೋಟಿ ರೂ), ಸ್ಟಾಂಪ್‌ಗಳು ಮತ್ತು ನೋಂದಣಿ (25,000 ಕೋಟಿ ರೂ)ಯಲ್ಲಿ ಹೆಚ್ಚಳವಾಗಿದೆ.

15ನೇ ಹಣಕಾಸು ಆಯೋಗದ ವಿಕೇಂದ್ರೀಕರಣ ಮತ್ತು ಒಟ್ಟು ಅನುದಾನ 13,000 ಕೋಟಿ ರೂಪಾಯಿ ಜೊತೆಗೆ ಜಿಎಸ್‌ಟಿ ಒಳಗೊಂಡಿರುವ ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು 37,000 ಕೋಟಿ ರೂಪಾಯಿಗಳಾಗಿದೆ. ಇದರಿಂದ ಕೇಂದ್ರದಿಂದ 50,000 ಕೋಟಿ ರೂಪಾಯಿ ಬರಲಿದೆ.

ಅಲ್ಲದೆ, ರಾಜ್ಯವು ಸುಮಾರು 85,000 ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲವನ್ನು ಎರವಲು ಪಡೆಯುತ್ತದೆ, ಇದು 2022-23 ರ ಬಜೆಟ್ ಅಂದಾಜಿಗಿಂತ ಸುಮಾರು 19,000 ಕೋಟಿ ರೂಪಾಯಿಯಾಗುತ್ತದೆ. 2023-24ರ ಅವಧಿಯಲ್ಲಿ ಒಟ್ಟು 238.09 ಸಾವಿರ ಕೋಟಿ ರೂಪಾಯಿಗಳಾಗಿದೆ. 305.3 ಸಾವಿರ ಕೋಟಿ ರೂ.ಗಳ ಒಟ್ಟು ವೆಚ್ಚದೊಂದಿಗೆ ಕೊರತೆ ಮತ್ತು ವೆಚ್ಚವನ್ನು ಸ್ಪಷ್ಟವಾಗಿ ನಿರ್ವಹಿಸಿದ್ದಾರೆ. ಇದರಿಂದ 12,522 ಕೋಟಿ ರೂ.ಗಳ ಆದಾಯ ಕೊರತೆ ಉಂಟಾಗಲಿದೆ. ಹಣಕಾಸು ತಜ್ಞರು ಈ ವರ್ಷ ಕೊರತೆಯು ಐದು ಖಾತರಿಗಳ ಮೇಲೆ ಹೊರೆಬೀಳಬಹುದು ಎಂದು ಭಾವಿಸಿದ್ದನ್ನು ಮುಖ್ಯಮಂತ್ರಿಗಳು ಹುಸಿಗೊಳಿಸಿದ್ದಾರೆ.

## ಸಹಕಾರ

ರಾಜ್ಯದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡುತ್ತಿರುವ ಅಲ್ಪಾವಧಿ ಸಾಲದ ಮಿತಿಯನ್ನು ಮೂರು ಲಕ್ಷ ರೂ. ಗಳಿಂದ ಐದು ಲಕ್ಷ ರೂ. ಗಳಿಗೆ ಹೆಚ್ಚಿಸಲಾಗಿದೆ. ಅದೇ ರೀತಿ ಶೇ. 3ರ ಬಡ್ಡಿದರದಲ್ಲಿ ನೀಡುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಮಿತಿಯನ್ನು 10 ಲಕ್ಷ ರೂ. ಗಳಿಂದ 15 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ 35 ಲಕ್ಷಕ್ಕಿಂತ ಹೆಚ್ಚಿನ ರೈತರಿಗೆ 25,000 ಕೋಟಿ ರೂ.ಗಳಷ್ಟು ಸಾಲ ವಿತರಣೆ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ.

ರೈತರಿಗೆ ತಮ್ಮ ಹಾಗೂ ನೆರೆಹೊರೆಯ ರೈತರ ಉತ್ಪನ್ನಗಳನ್ನು ಸಂಗ್ರಹಿಸಲು ಅನುವಾಗುವಂತೆ ಗೋದಾಮು ನಿರ್ಮಿಸಿಕೊಳ್ಳಲು ಬ್ಯಾಂಕುಗಳು ನೀಡುವ ರೂ. 20 ಲಕ್ಷ ವರೆಗಿನ ಸಾಲಕ್ಕೆ ರಾಜ್ಯ ಸರ್ಕಾರವು ಶೇ.7 ರಷ್ಟು ಬಡ್ಡಿ ಸಹಾಯಧನ ನೀಡಲಿದೆ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣಿಕೆಗಾಗಿ ನಾಲ್ಕು ಚಕ್ರದ ಪಿಕ್‌ಅಪ್ ವ್ಯಾನ್ ಖರೀದಿಸಲು ಏಳು ಲಕ್ಷ ರೂ. ವರೆಗಿನ ಸಾಲವನ್ನು ಶೇ. 4ರ ಬಡ್ಡಿ ದರದಲ್ಲಿ ನೀಡುವುದರ ಬಗ್ಗೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ B.O.M ಸದಸ್ಯರುಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ


ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ದಿನಾಂಕ : 25ನೇ ಜುಲೈ 2023ರ ಮಂಗಳವಾರದಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರಿಗೆ ಹಾಗೂ B.O.M ಸದಸ್ಯರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆಂಗಲ್ ಹನುಮಂತಯ್ಯ ರಸ್ತೆ, ಡಬಲ್ ರೋಡ್, ಬೆಂಗಳೂರು - 560027 ಇಲ್ಲಿ ಏರ್ಪಡಿಸಲಾಗಿರುತ್ತದೆ.

ಸದರಿ ವಿಚಾರ ಸಂಕಿರಣದಲ್ಲಿ ಈ ಕೆಳಗೆ ವಿವರಿಸಿದ ವಿಷಯಗಳ ಮೇಲೆ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ:25.07.2023ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

- ಪದಾಧಿಕಾರಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು
- ವೃತ್ತಿಪರ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು
- B.O.M ಸದಸ್ಯರ ಜವಾಬ್ದಾರಿ ಮತ್ತು ಕರ್ತವ್ಯಗಳು.
- ಸಾಲ ಮತ್ತು ಮುಂಗಡಗಳು.

ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ. ಹೆಚ್ಚಿನ ವಿವರಕ್ಕಾಗಿ ಶ್ರೀ ಆರ್.ಎಚ್. ಕುಮಾರ (ಮೊ) 9980859556 ಮತ್ತು ಶ್ರೀ ಎನ್. ರಮೇಶ್ (ಮೊ) 9448003167 ಇವರುಗಳನ್ನು ಸಂಪರ್ಕಿಸಬಹುದಾಗಿದೆ.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ಉಡುಪಿ ಕೋ-ಆಪರೇಟಿವ್ ಟೌನ್ ಬ್ಯಾಂಕಿನ 2022-23ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಪಿ. ಕೃಷ್ಣಮೂರ್ತಿ ಆಚಾರ್ಯ, ಮುಖ್ಯ ಸಲಹೆಗಾರರಾದ ಶ್ರೀ ಎಸ್. ಕುಮಾರಸ್ವಾಮಿ ಉಡುಪ ರವರುಗಳು ಉಪಸ್ಥಿತರಿದ್ದರು.

## ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ : ಹೊಸ ಶಾಖೆಗಳ ಉದ್ಘಾಟನೆ



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 24ನೇ ಶಾಖೆಯನ್ನು ಯಾದವಾಡದಲ್ಲಿ ದಿನಾಂಕ : 14.06.2023 ರಂದು ಮ. ಘ.ಚ. ಶ್ರೀ ಶಿವಲಿಂಗ ಮುರುಘರಾಜೇಂದ್ರ ಶಿವಾಚಾರ್ಯರು ಶಿವಯೋಗೇಶ್ವರ ಮಠ, ಬಾಗೋಜಿಕೊಪ್ಪ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 25ನೇ ಶಾಖೆಯನ್ನು ರಾಮದುರ್ಗದಲ್ಲಿ ದಿನಾಂಕ : 14.06.2023 ರಂದು ಶ್ರೀ ಮ. ಗ.ಘ. ಚನ್ನಮಲ್ಲಶಿವಾಚಾರ್ಯ ಮಹಾಸ್ವಾಮಿಗಳು ಗಚ್ಚಿನ ಹಿರೇಮಠ, ಕಿಲ್ಲಾ ತೋರಗಲ್ಲ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 26ನೇ ಶಾಖೆಯನ್ನು "ಅಂಕಲಗಿ"ಯಲ್ಲಿ ದಿನಾಂಕ : 14.06.2023 ರಂದು ಶ್ರೀ ಮ.ನಿ.ಪ್ರ. ಅಮರಸಿದ್ದೇಶ್ವರ ಮಹಾಸ್ವಾಮಿಗಳು ಶ್ರೀ ಅಡವಿಸಿದ್ದೇಶ್ವರ ಮಠ, ಕುಂದರಗಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 27ನೇ ಶಾಖೆಯನ್ನು "ಇಂಚಲ"ದಲ್ಲಿ ದಿನಾಂಕ : 14.06.2023 ರಂದು ಶ್ರೀ ಶ್ರೀ ಶ್ರೀ ಡಾ. ಶಿವಾನಂದ ಭಾರತಿ ಮಹಾಸ್ವಾಮಿಗಳು ಸಾಧು ಸಂಸ್ಥಾನ ಮಠ, ಸುಕ್ಷೇತ್ರ ಇಂಚಲ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

## ಕಾರ್ಡ್ ನೆಟ್‌ವರ್ಕ್ ಆಯ್ಕೆ ಗ್ರಾಹಕನ ವಿವೇಚನೆಗೆ : ಆರ್‌ಬಿಐ ಸುತ್ತೋಲೆ ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳಿಗೆ ಆರ್‌ಬಿಐ ಕರಡು ಸುತ್ತೋಲೆ




**ಬೆಂಗಳೂರು :** ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ನೀಡುವ ಸಂದರ್ಭದಲ್ಲಿ, ಯಾವ ಕಾರ್ಡ್ ನೆಟ್‌ವರ್ಕ್ ಬೇಕು ಎಂಬುದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಗ್ರಾಹಕರಿಗೆ ನೀಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. ಇದು ನಿಯಮವಾಗಿ ಜಾರಿಗೆ ಬಂದ ನಂತರದಲ್ಲಿ, ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಕೂಡ ಇದನ್ನು ಪಾಲಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಬುಧವಾರ ಕರಡು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಇದಕ್ಕೆ ಸಲಹೆಗಳನ್ನು, ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ. ಸಲಹೆಗಳನ್ನು ಆಗಸ್ಟ್ 4ಕ್ಕೆ ಮೊದಲು ಸಲ್ಲಿಸಬೇಕು.

ಅಧಿಕೃತ ಕಾರ್ಡ್ ನೆಟ್‌ವರ್ಕ್ ಕಂಪನಿಗಳು, ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಸೇವೆ ಒದಗಿಸುವ ವಿಚಾರದಲ್ಲಿ ಬ್ಯಾಂಕ್ ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿರುತ್ತವೆ. ಯಾವ ನೆಟ್‌ವರ್ಕ್‌ನ ಕಾರ್ಡ್‌ಅನ್ನು ಗ್ರಾಹಕನಿಗೆ ನೀಡಬೇಕು ಎಂಬುದನ್ನು ಕಾರ್ಡ್ ನೀಡುವ ಕಂಪನಿ (ಬ್ಯಾಂಕ್ ಅಥವಾ ಎನ್‌ಬಿಎಫ್‌ಸಿ) ತೀರ್ಮಾನಿಸುತ್ತಿದೆ ಎಂದು ಆರ್‌ಬಿಐ ಹೇಳಿದೆ.

ಪರಿಶೀಲನೆ ನಡೆಸಿದಾಗ, ಕಾರ್ಡ್ ನೆಟ್‌ವರ್ಕ್ ಕಂಪನಿ ಹಾಗೂ ಕಾರ್ಡ್ ನೀಡುವ ಕಂಪನಿ ನಡುವೆ ಇರುವ ಒಪ್ಪಂದಗಳು ಗ್ರಾಹಕನಿಗೆ ಆಯ್ಕೆಗಳನ್ನು ಒದಗಿಸುವುದಕ್ಕೆ ಪೂರಕವಾಗಿ ಇಲ್ಲ ಎಂಬುದು ಕಂಡುಬಂದಿದೆ' ಎಂದು ಆರ್‌ಬಿಐ ವಿವರಿಸಿದೆ.

ಗ್ರಾಹಕರ ಹಿತ ಕಾಯುವ ಉದ್ದೇಶದಿಂದ ಹಾಗೂ ಪಾವತಿ ವ್ಯವಸ್ಥೆಯ ಹಿತದೃಷ್ಟಿಯಿಂದ, 'ಕಾರ್ಡ್ ನೀಡುವ ಕಂಪನಿಯು ಕಾರ್ಡ್ ನೆಟ್‌ವರ್ಕ್ ಕಂಪನಿ ಜೊತೆ ಮಾಡಿಕೊಳ್ಳುವ ಒಪ್ಪಂದವು, ಬೇರೆ ಕಾರ್ಡ್ ನೆಟ್‌ವರ್ಕ್ ಸೇವೆ ಬಳಸಲು ಅಡ್ಡಿ ಉಂಟು ಮಾಡುವಂತೆ ಇರಬಾರದು ಎಂದು ಕರಡು ಸುತ್ತೋಲೆಯು ಹೇಳಿದೆ. ಕಾರ್ಡ್ ನೀಡುವ ಕಂಪನಿಯು ಒಂದಕ್ಕಿಂತ ಹೆಚ್ಚು ನೆಟ್‌ವರ್ಕ್‌ಗಳ ಕಾರ್ಡ್ ಸೇವೆ ಒದಗಿಸಬೇಕು ಎಂದು ಸೂಚಿಸಿದೆ. ತಮಗೆ ಯಾವ ಕಾರ್ಡ್ ನೆಟ್‌ವರ್ಕ್ ಇಷ್ಟ ಎಂಬುದನ್ನು ಗ್ರಾಹಕರೇ ಆಯ್ಕೆ ಮಾಡಿಕೊಳ್ಳಬೇಕು. ಈ ಸೂಚನೆಗಳು ಅಕ್ಟೋಬರ್ 1 ರಿಂದ ಜಾರಿಗೆ ಬರಲಿವೆ ಎಂದು ಆರ್‌ಬಿಐ ಹೇಳಿದೆ.

## ಪಿ. ಮಹೇಶ, ಸಹಕಾರ ಸಂಘಗಳ ಜಂಟಿ ನಿಬಂಧಕರು ಪಟ್ಟಣ ಬ್ಯಾಂಕುಗಳ ವಿಭಾಗದ ಮುಖ್ಯಸ್ಥರಾಗಿ ಅಧಿಕಾರ ಸ್ವೀಕಾರ



**ಬೆಂಗಳೂರು :** ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ಪಟ್ಟಣ ಬ್ಯಾಂಕುಗಳ ವಿಭಾಗದ ಮುಖ್ಯಸ್ಥರಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಪಿ. ಮಹೇಶ ರವರು ಅಧಿಕಾರ ವಹಿಸಿಕೊಂಡಿರುತ್ತಾರೆ.

## ಶ್ರೀ ಕಾಡಸಿದ್ಧೇಶ್ವರ ಪಟ್ಟಣ ಸಹಕಾರ ಬ್ಯಾಂಕ್ : ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ



ಶ್ರೀ ಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕ ನಿ. ಬನಹಟ್ಟಿಯ ಶ್ರೀ ಶಂಕರಲಿಂಗಪ್ಪ ಮ. ಜುಂಜಪ್ಪನವರ ಇವರು ಅಧ್ಯಕ್ಷ ಸ್ಥಾನಕ್ಕೆ ಹಾಗೂ ಶ್ರೀ ಓ.ಆರ್. ಕಾಬರಾ ಇವರು ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ದಿನಾಂಕ : 14/06/2023 ರಂದು ನಡೆದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಸಿದ್ರಾಮಪ್ಪ ಸಿದಲಿಂಗಪ್ಪ ಸವದತ್ತಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಮಲ್ಲಿನಾಥ ಸಂಕಪ್ಪ ಕಕಮರಿ ಇವರು ಮುಂದಿನ, ದಿನಾಂಕ : 06/01/2025ರ, ಅವಧಿಗಾಗಿ ಆಯ್ಕೆಯಾಗಿದ್ದಾರೆ. ಅವರ ಅಧಿಕಾರದ ಅವಧಿಯಲ್ಲಿ ಬ್ಯಾಂಕು ಇನ್ನಷ್ಟು ಅಭಿವೃದ್ಧಿ ಹೊಂದಿ, ಬ್ಯಾಂಕಿನ ಸೇವೆಗಳು ಜಿಲ್ಲೆಯ ಎಲ್ಲ ಜನರಿಗೂ ದೊರೆಯುವಂತಾಗಲೆಂದು ನಮ್ಮ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗ ಹಾಗೂ ಪಿಗ್ಮಿ ಸಂಗ್ರಹಕಾರರ ಪರವಾಗಿ ಅಭಿನಂದನೆಗಳು.

## ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : ರಜತ ಮಹೋತ್ಸವ ಸಮಾರಂಭ




**ಹೂವಿನಹಡಗಲಿ :** ನಮ್ಮ ತಂದೆ ದಿವಂಗತ ಎಂ.ಪಿ. ಪ್ರಕಾಶ ರವರು 25 ವರ್ಷಗಳ ಹಿಂದೆ ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಿದ್ದು, ಈಗದು ರಜತ ಮಹೋತ್ಸವವನ್ನು ಆಚರಿಸುತ್ತಿದೆ ಮುಂದೆ ಸುವರ್ಣ ಸಂಭ್ರಮವನ್ನು ಆಚರಿಸುವಂತಾಗಲಿ ಎಂದು ಹರಪನಹಳ್ಳಿ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ ತಿಳಿಸಿದರು.

ಸ್ಥಳೀಯ ರಂಗಭಾರತಿ ರಂಗಮಂದಿರದಲ್ಲಿ ದಿನಾಂಕ : 30.06.2023ರಂದು ಹಮ್ಮಿಕೊಂಡಿದ್ದ ಹಡಗಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 25 ವರ್ಷಗಳ ರಜತ ಸಿರಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜೀವನದಲ್ಲಿ ಕಷ್ಟಪಟ್ಟರೆ ಮಾತ್ರ ಪ್ರತಿಫಲ ಕಾಣಲು ಸಾಧ್ಯ ಎಂಬುದಕ್ಕೆ ನಾನೆ ಉದಾಹರಣೆಯಾಗಿದ್ದೇನೆ. ಅದೇ ರೀತಿ ಬ್ಯಾಂಕ್ ತನ್ನ ಸೇವಾವಧಿಯಲ್ಲಿ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯ ಶ್ರಮದಿಂದ 25 ವರ್ಷಗಳನ್ನು ಪೂರೈಸಿ ಎತ್ತರಕ್ಕೆ ಬೆಳೆದು ನಿಂತಿದೆ ಎಂದು ಹೇಳಿದರು.

ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಸೋಗಿ ಪುರವರ್ಗ ಕಟ್ಟಿಮನಿಮಠದ ಶ್ರೀ ಷ॥ ಬ್ರ॥ ಅಭಿನವ ಸಿದ್ಧವೀರ ಶಿವಾಚಾರ್ಯ ಮಹಾಸ್ವಾಮಿಗಳು, ಗವಿಸಿದ್ಧೇಶ್ವರ ಮಠದ ಶ್ರೀ ಮ.ನಿ.ಪ್ರ. ಡಾ। ಹಿರಿಶಾಂತವೀರ ಮಹಾಸ್ವಾಮಿಗಳು, ಹಿರೇಮಲ್ಲನಕೆರೆ ವಿರಕ್ತಮಠದ ಶ್ರೀ ಮ.ನಿ.ಪ್ರ. ಅಭಿನವ ಚನ್ನಬಸವ ಮಹಾಸ್ವಾಮಿಗಳು, ಹಗರಿಬೊಮ್ಮನಹಳ್ಳಿಯ ಶ್ರೀ ಹಾಲಸ್ವಾಮಿಗಳು ವಹಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ. ನಾಗಭೂಷಣ ವಹಿಸಿದ್ದರು. ಈ ಸಮಾರಂಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಲಾಲ್ಯಾನಾಯ್ಕ ಟಿ., ನಿರ್ದೇಶಕರುಗಳಾದ ಶ್ರೀಮತಿ ಎಂ.ಪಿ. ಸುಮ ವಿಜಯ್, ಶ್ರೀ ಎಸ್.ಎಂ. ರವೀಂದ್ರಶೆಟ್ಟಿ, ಶ್ರೀ ಮುರುಗೇಶ್ ತುರುಕಾಣಿ, ಶ್ರೀ ಬೀರಪ್ಪ ಹೆಚ್, ಶ್ರೀ ಹನುಮಂತಪ್ಪ ಜಿ., ಶ್ರೀ ಶಿವಪ್ಪ ಗಡ್ಡಿಗೌಡ್ರ, ಶ್ರೀ ಮಲ್ಲಪ್ಪ ಜಿ., ಶ್ರೀಮತಿ ಮಂಗಳ ಸೊಪ್ಪಿನ, ಶ್ರೀಮತಿ ಮೋಹಿನಿ ಬಿ. ಜೈನ್, ಶ್ರೀ ವೀರೇಶ ಹಣ್ಣಿ, ಶ್ರೀ ರಾಜಾಭಕ್ಷಿ ಹೆಚ್, ವೃತ್ತಿಪರ ನಿರ್ದೇಶಕರಾದ ಶ್ರೀ ರಮೇಶ ಜಂಬಣ್ಣ ಗಣಪ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಸದಾನಂದ ಕೆ., ಉಪಸ್ಥಿತರಿದ್ದರು. ಶ್ರೀ ಶಿವಪ್ಪ ಗಡ್ಡಿಗೌಡ್ರ ಸ್ವಾಗತಿಸಿದರು. ಶ್ರೀ ಹನುಮಂತ ನಿರೂಪಿಸಿದರು. ಶ್ರೀಮತಿ ಎಂ.ಪಿ. ಸುಮಾ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಬಾಲ್ಕಿ : ಪ್ರತಿಭಾ ಪುರಸ್ಕಾರ



**ಬಾಲ್ಕಿ :** ಬಾಲ್ಕಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ವತಿಯಿಂದ 2022-23ರಲ್ಲಿ ತಾಲೂಕು ಮಟ್ಟದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 1ನೇ ರ್‍ಯಾಂಕ್ ಪಡೆದ ಕುಮಾರಿ ಲಕ್ಷ್ಮೀಬಾಯಿ ಪ್ರಭು ಮತ್ತು 2ನೇ ರ್‍ಯಾಂಕ್ ಪಡೆದ ಕುಮಾರಿ ದಿವ್ಯಾ ಸಂತೋಷ ರವರುಗಳನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಬಿ. ವಂಕೆ ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಸೂರ್ಯಮತಿ ಸಿ. ಮಡ್ಡೆ ರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಉಪಸ್ಥಿತರಿದ್ದರು.

# ಗೃಹ ಸಾಲದ ಹೊರೆ ಇಳಿಸಲು 4 ಮಾರ್ಗಗಳು

▸▸ **ರಾಜೇಶ್‌ಕುಮಾರ್ ಟಿ.ಆರ್.,** ಚಾರ್ಟರ್ಡ್ ಅಕೌಂಟೆಂಟ್

ಕಳೆದ ಒಂದು ವರ್ಷದಲ್ಲಿ ಬ್ಯಾಂಕುಗಳು ಗೃಹ ಸಾಲದ ಮೇಲಿನ ಬಡ್ಡಿದರವನ್ನು ಗಣನೀಯವಾಗಿ ಹೆಚ್ಚಳ ಮಾಡಿವೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊದರ, ಅಂದರೆ ಬ್ಯಾಂಕುಗಳಿಗೆ ಕೊಡುವ ಸಾಲದ ಮೇಲಿನ ಬಡ್ಡಿದರವನ್ನು, ಶೇ.6.5ಕ್ಕೆ ಹೆಚ್ಚಳ ಮಾಡಿರುವುದರಿಂದ ಬ್ಯಾಂಕ್ ಸಾಲಗಳ ಬಡ್ಡಿಕೂಡ ತುಟ್ಟಿಯಾಗಿದೆ. ಬ್ಯಾಂಕ್ ಸಾಲಗಳ ಬಡ್ಡಿ ಹೆಚ್ಚಳದಿಂದ ಮಾಸಿಕ ಮರುಪಾವತಿ ಕಂತು (ಇಎಂಐ) ಜಾಸ್ತಿಯಾಗಿದೆ. ಕೆಲವು ಸಾಲಗಳ ಮರುಪಾವತಿ ಅವಧಿ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಗೃಹ ಸಾಲದ ಹೊರೆ ಇಳಿಸಿಕೊಳ್ಳುವುದು ಹೇಗೆ?

**01. ಡೌನ್ ಪೇಮೆಂಟ್ ಜಾಸ್ತಿ ಮಾಡುವುದು :** ಬ್ಯಾಂಕುಗಳು ಸಾಮಾನ್ಯವಾಗಿ ಮನೆಯ ಮೌಲ್ಯದ ಆಧಾರದಲ್ಲಿ ಶೇ.80 ರಿಂದ ಶೇ.90ರಷ್ಟು ಸಾಲ ಕೊಡಲು ತಯಾರಿರುತ್ತವೆ. ಆದರೆ ನೀವು ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಮೊತ್ತವನ್ನು ಡೌನ್ ಪೇಮೆಂಟ್ ಮಾಡುವುದು ಒಳಿತು. ಹೀಗೆ ಮಾಡಿದಾಗ ಬ್ಯಾಂಕಿನಿಂದ ಪಡೆದುಕೊಳ್ಳುವ ಸಾಲದ ಮೊತ್ತ ತಗ್ಗುತ್ತದೆ. ಕಡಿಮೆ ಮೊತ್ತದ ಸಾಲ ಪಡೆದಾಗ ಮಾಸಿಕ ಕಂತಿನ (ಇಎಂಐ) ಮೊತ್ತ ಕಡಿಮೆಯಾಗುತ್ತದೆ, ದೀರ್ಘಾವಧಿಯಲ್ಲಿ ಬಡ್ಡಿ ರೂಪದಲ್ಲಿ ಬ್ಯಾಂಕಿಗೆ ಪಾವತಿಸುವ ದೊಡ್ಡ ಮೊತ್ತದ ಹಣ ಉಳಿತಾಯವಾಗುತ್ತದೆ. ಡೌನ್ ಪೇಮೆಂಟ್ ಹೆಚ್ಚಿಗೆ ಮಾಡುವುದರಿಂದ ಪಡೆದುಕೊಳ್ಳುವ ಸಾಲಕ್ಕೆ ಬದ್ಧರಾಗಿರುತ್ತೀರಿ ಎಂದು ಬ್ಯಾಂಕಿನವರಿಗೆ ವಿಶ್ವಾಸ ಮೂಡುತ್ತದೆ. ಆದ್ದರಿಂದ ಅವರು ಸ್ಪರ್ಧಾತ್ಮಕ ಬಡ್ಡಿದರದಲ್ಲಿ ಸಾಲ ಕೊಡುವ ಸಾಧ್ಯತೆ ಹೆಚ್ಚಾಗುತ್ತದೆ.

**02. ಅವಧಿಗೆ ಮುನ್ನ ಮರುಪಾವತಿ ಮಾಡಿ :** ಗೃಹ ಸಾಲವನ್ನು ಅವಧಿಗೆ ಮೊದಲೇ ತೀರಿಸಲು ಯತ್ನಿಸಿ. ಅಂದರೆ, ಸಾಲದ ಅಸಲಿನ ಮೊತ್ತಕ್ಕೆ ಮಾಸಿಕ ಕಂತು (ಇಎಂಐ) ಹೊರತುಪಡಿಸಿ ಹೆಚ್ಚುವರಿ ಮೊತ್ತವನ್ನು ಪಾವತಿ ಮಾಡಿ. ಸರಳವಾಗಿ ಹೇಳುವುದಾದರೆ ಸಾಲದ ಕಂತಿನ ಜೊತೆ ಎಷ್ಟು ಸಾಧ್ಯವೋ ಅಷ್ಟು ಹೆಚ್ಚುವರಿ ಮೊತ್ತವನ್ನು ಸಾಲಕ್ಕೆ ಪಾವತಿ ಮಾಡುತ್ತಾ ಹೋಗಿ. ಬ್ಯಾಂಕಿನವರು ಗೃಹಸಾಲದ ಅಸಲಿನ ಮೊತ್ತ ಎಷ್ಟು ಬಾಕಿ ಇದೆ ಎನ್ನುವುದನ್ನು ಆಧರಿಸಿ ಬಡ್ಡಿಯ ಮೊತ್ತ ಲೆಕ್ಕ ಹಾಕುವ ಕಾರಣ, ಎಷ್ಟು ಬೇಗ ಅಸಲು ತೀರಿಸುತ್ತೀರೋ ಅಷ್ಟು ಅನುಕೂಲ ನಿಮಗಾಗುತ್ತದೆ. ಉದಾಹರಣೆಗೆ ನೀವು 20 ವರ್ಷಗಳ ಅವಧಿಗೆ ಶೇ.8ರ ಬಡ್ಡಿದರದಲ್ಲಿ ರೂ.50 ಲಕ್ಷ ಸಾಲ ಪಡೆದಿದ್ದರೆ ಮಾಸಿಕ ಕಂತು (ಇಎಂಐ) ರೂ.43 ಸಾವಿರ ಆಗುತ್ತದೆ. ನೀವು ರೂ.5 ಲಕ್ಷವನ್ನು ಮೊದಲೇ ತೀರಿಸಿದರೆ, ಮಾಸಿಕ ಕಂತಿನ ಮೊತ್ತ ರೂ.38,500 ಆಗುತ್ತದೆ. ಫ್ಲೋಟಿಂಗ್ ಬಡ್ಡಿದರದಲ್ಲಿ ಸಾಲ ಪಡೆದಿದ್ದರೆ ಬಹುತೇಕ ಬ್ಯಾಂಕುಗಳು ಯಾವುದೇ ದಂಡ ವಿಧಿಸದೆ, ಗೃಹ ಸಾಲ ಪಡೆದ 6 ತಿಂಗಳ ಬಳಿಕ ಪ್ರೀಪೇಮೆಂಟ್‌ಗೆ ಅವಕಾಶ ಕಲ್ಪಿಸುತ್ತವೆ. ಒಂದೊಮ್ಮೆ ನಿಶ್ಚಿತ ಬಡ್ಡಿದರದಲ್ಲಿ ಸಾಲ ಪಡೆದಿದ್ದರೆ ಕೆಲವು ಬ್ಯಾಂಕುಗಳು ಪ್ರೀಪೇಮೆಂಟ್ ಶುಲ್ಕ ಹಾಕುತ್ತವೆ. ಸಾಲ ಪಡೆಯುವಾಗ ಪ್ರೀಪೇಮೆಂಟ್ ನಿಬಂಧನೆಗಳು ಏನಿವೆ ಎಂದು ಅರಿತು ಮುನ್ನಡೆಯುವುದು ಮುಖ್ಯ.

**03. ಫ್ಲೋಟಿಂಗ್ ಬಡ್ಡಿ ಆಯ್ಕೆ ಮಾಡಿಕೊಳ್ಳಿ :** ಫಿಕ್ಸೆಡ್ ಬಡ್ಡಿದರದಲ್ಲಿ ಸಾಲ ಪಡೆಯುವುದಕ್ಕಿಂತ ಫ್ಲೋಟಿಂಗ್ ಬಡ್ಡಿದರದಲ್ಲಿ ಗೃಹ ಸಾಲ ಪಡೆದರೆ ಹೆಚ್ಚು ಅನುಕೂಲ. ಫ್ಲೋಟಿಂಗ್ ಬಡ್ಡಿದರದಲ್ಲಿ ಗೃಹ ಸಾಲ ಪಡೆದಾಗ ಬಡ್ಡಿದರ ಒಂದೇ ರೀತಿಯಲ್ಲಿ ನಿಗದಿಯಾಗಿರುವುದಿಲ್ಲ. ಮಾರುಕಟ್ಟೆಯಲ್ಲಿರುವ ಬಡ್ಡಿದರಕ್ಕೆ ಅನುಗುಣವಾಗಿ ಏರಿಳಿತ ಕಾಣುತ್ತಿರುತ್ತದೆ. ಫ್ಲೋಟಿಂಗ್ ಸಾಲದ ಮೇಲಿನ ಬಡ್ಡಿ ದರಗಳು ಮಾರುಕಟ್ಟೆಯಲ್ಲಿ ಕಡಿಮೆ ಆದಾಗ ಅದರ ಲಾಭ ನಿಮಗೂ ಸಿಗುತ್ತದೆ. ನಿಮ್ಮ ಮಾಸಿಕ ಕಂತಿನ ಮೊತ್ತ ಕಡಿಮೆ ಆಗುತ್ತದೆ. ಉದಾಹರಣೆಗೆ ಶೇ.8.5ರ ಬಡ್ಡಿದರದಲ್ಲಿ 20 ವರ್ಷಗಳ ಅವಧಿಗೆ ರೂ. 50ಲಕ್ಷ ಸಾಲ ಪಡೆದಿದ್ದೀರಿ ಎಂದಿಟ್ಟುಕೊಳ್ಳಿ. ಇಂತಹ ಸನ್ನಿವೇಶದಲ್ಲಿ ಮಾಸಿಕ ರೂ.43,391 ಇಎಂಐ ಪಾವತಿಸಬೇಕಾಗುತ್ತದೆ. ಬಡ್ಡಿದರ ಶೇ.7.5ಕ್ಕೆ ಇಳಿದರೆ ಮಾಸಿಕ ಕಂತು ರೂ.40,881 ಆಗುತ್ತದೆ. ಈ ರೀತಿ ಫ್ಲೋಟಿಂಗ್ ಬಡ್ಡಿದರದಲ್ಲಿ ಬಡ್ಡಿದರ ಹೆಚ್ಚಳವಾಗುವ ಸಾಧ್ಯತೆಯೂ ಇರುತ್ತದೆ. ಅದನ್ನುಅರಿತು ಮುನ್ನಡೆಯಬೇಕಾಗುತ್ತದೆ.

**04. ಹೋಮ್ ಲೋನ್‌ಸ್ವಿಚ್ :** ನೀವು ರೂ.50 ಲಕ್ಷ ಸಾಲ ಪಡೆದಿದ್ದು ಸದ್ಯ ಬ್ಯಾಂಕಿನಲ್ಲಿ ಶೇ.9.5ರಷ್ಟು ಬಡ್ಡಿ ನಿಗದಿ ಮಾಡಿದ್ದಾರೆ ಎಂದು ಭಾವಿಸೋಣ. ಮತ್ತೊಂದು ಬ್ಯಾಂಕಿನಲ್ಲಿ ನಿಮಗೆ ಶೇ.8.5ರ ಬಡ್ಡಿದರದಲ್ಲಿ ಸಾಲ ಸಿಕ್ಕರೆ ಹೋಮ್ ಲೋನ್ ಸ್ವಿಚ್ ಮಾಡಿಕೊಂಡು ಆ ಸಾಲವನ್ನು ಅದೇ ಬ್ಯಾಂಕಿಗೆ ವರ್ಗಾವಣೆ ಮಾಡಿಕೊಳ್ಳಬಹುದು. ಹೀಗೆ ಸಾಲ ವರ್ಗಾವಣೆ ಮಾಡಲು ಮುಂದಾಗುವಾಗ ನಿಮಗೆ ಯಾವ ಬ್ಯಾಂಕಿನಿಂದ ಹೆಚ್ಚು ಅನುಕೂಲ ಸಿಗುತ್ತದೆ ಎಂದು ಮನಗಂಡು ಮುಂದುವರಿಯಬೇಕು. ಹೆಚ್ಚು ಶುಲ್ಕ ವಿಧಿಸದ, ಪ್ರೀಪೇಮೆಂಟ್ ನಿಬಂಧನೆಗಳನ್ನು ಹೇರದ ಬ್ಯಾಂಕಿಗೆ ಗೃಹ ಸಾಲ ವರ್ಗಾವಣೆ ಮಾಡಿಕೊಂಡರೆ ಹೆಚ್ಚು ಅನುಕೂಲ.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**1. ಪಟ್ಟಣ ಸಹಕಾರ ಬ್ಯಾಂಕುಗಳು ಸಾಲದ ಮೇಲಿನ ಬಡ್ಡಿಯನ್ನು ಬಂಡವಾಳೀಕರಣ (Capitalisation) ಮಾಡಬಹುದೇ? ಇದು ಸಹಕಾರ ಸಂಘಗಳ ಅಧಿನಿಯಮಕ್ಕೆ ವ್ಯತಿರಿಕ್ತವಾಗಿಲ್ಲವೇ? ಈ ಬಗ್ಗೆ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಠೇವಣಿಗಳಿಗೆ ನೀಡುವ ಬಡ್ಡಿ ಮತ್ತು ತಮ್ಮ ಸಾಲಗಳ ಮೇಲೆ ವಿಧಿಸುವ ಬಡ್ಡಿ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನಗಳನ್ನು ಅವಲಂಬಿಸಿದೆಯೇ ವಿನಹ ಸಹಕಾರ ಸಂಘಗಳ ಅಧಿನಿಯಮಗಳಿಗಲ್ಲ. ಭಾರತೀಯ ರಿಜರ್ವ್ ಬ್ಯಾಂಕ್ ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಭಾರತೀಯ ರಿಜರ್ವ್ ಬ್ಯಾಂಕು ಪಟ್ಟಣ ಸಹಕಾರ ಬ್ಯಾಂಕುಗಳ ಠೇವಣಿ ಮತ್ತು ಸಾಲದ ಮೇಲೆ ವಿಧಿಸಬಹುದಾದ ಬಡ್ಡಿಯ ಬಗ್ಗೆ ನಿರ್ದೇಶನ ನೀಡಲು ಸಂಪೂರ್ಣ ಅಧಿಕಾರ ಹೊಂದಿದೆ. ಸಾಲದ ಮೇಲಿನ ಬಡ್ಡಿ ಬಂಡವಾಳೀಕರಣ ಎಂದರೆ, ಪಾವತಿಯಾಗದ ಸಂಚಿತ ಬಡ್ಡಿಯನ್ನು ಅಸಲಿಗೆ ಸೇರಿಸುವುದು. ರಿಜರ್ವ್ ಬ್ಯಾಂಕಿನ ಮಾರ್ಗಸೂಚಿ ಪ್ರಕಾರ ಬ್ಯಾಂಕುಗಳು ಪ್ರತಿ ತಿಂಗಳು ತಮ್ಮ ಸಾಲಗಳ ಖಾತೆಗೆ ಬಡ್ಡಿಯನ್ನು ವಿಧಿಸಬೇಕು. ಸಾಲಗಾರ ತಕ್ಷಣ ಬಡ್ಡಿ ಪಾವತಿಸದಿದ್ದರೆ ಬಡ್ಡಿಯ ಬಂಡವಾಳೀಕರಣವಾಗುತ್ತದೆ. ಎಲ್ಲಿಯವರೆಗೆ ಸಾಲದ ಖಾತೆ ಸುಸ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ ಬ್ಯಾಂಕುಗಳು ಬಡ್ಡಿಯನ್ನು ಬಂಡವಾಳೀಕರಣ ಮಾಡಬಹುದು. ಉದಾಹರಣೆಗೆ, ಪುನರ್ರಚನೆಗೊಂಡ ಸಾಲ (Restructure Loan), ಗೃಹ ಸಾಲ, ಇತ್ಯಾದಿಗಳ ಮೇಲೆ ಬಡ್ಡಿ ಪಾವತಿಯಿ ಮೇಲೆ ಮೊರಟೋರಿಯಂ ಇರುತ್ತದೆ. ಮೊರಟೋರಿಯಂ ಅವಧಿ ಮುಗಿಯುವರೆಗೂ ಪ್ರತಿ ತಿಂಗಳೂ ಬಡ್ಡಿ ಸಾಲದ ಖಾತೆಗೆ ಸೇರುತ್ತದೆ ಮತ್ತು ಚಕ್ರಬಡ್ಡಿ ಅನ್ವಯವಾಗುತ್ತದೆ. ಇತರ ಸಾಲಗಳಲ್ಲಿ 90 ದಿನಗಳವರೆಗೆ ಬಡ್ಡಿಯನ್ನು ಸಾಲಕ್ಕೆ ಸೇರಿಸಬಹುದು. ಸಾಲ ಸುಸ್ತಿಯಾದ ನಂತರವೂ ಬಡ್ಡಿ ಪಾವತಿಸದಿದ್ದರೆ, ಬಂಡವಾಳೀಕರಣ ಮಾಡಿದ ಬಡ್ಡಿಯನ್ನು ಸಾಲದ ಖಾತೆಯಿಂದ ತೆಗೆದು ಹಾಕಬೇಕಾಗುತ್ತದೆ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಹಾವೇರಿ ಜಿಲ್ಲೆಯ ಕನ್ನೂರಿನ ಯುವಕ ನಿರಂಜನ ಖಾನಗೌಡ ಅವರು ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಖಗೋಳ ಭೌತಶಾಸ್ತ್ರದಲ್ಲಿ ಎಂಎಸ್ಸಿ ಪೂರ್ಣಗೊಳಿಸಿದ್ದು, ಪೂರ್ವಜರಿಂದ ಬಂದ 60 ಎಕರೆ ಜಮೀನಿನಲ್ಲಿ ಅಸ್ಟ್ರೋ ಫಾರ್ಮ್ ನಿರ್ಮಿಸಿದ್ದಾರೆ. ಆಸಕ್ತರು ಈ ಆಸ್ಟ್ರೋ ಫಾರ್ಮ್‌ಗೆ ಭೇಟಿ ನೀಡಿ, ಗ್ರಹ, ಆಕಾಶಕಾಯ, ಗ್ರಹಣದ ಕುರಿತು ಮಾಹಿತಿ ಪಡೆದುಕೊಂಡು, ಆಕಾಶಕಾಯಗಳನ್ನು ನೋಡುವ ಅನುಭವವನ್ನು ಪಡೆದುಕೊಳ್ಳಬಹುದಾಗಿದೆ.
- ವಾರಣಾಸಿಗೆ ಘಾಟ್‌ನಲ್ಲಿದ್ದ ಹೆಚ್ಚಿನ ಸಂಖ್ಯೆಯ ಭಿಕ್ಷುಕರನ್ನು ಸದ್ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಪತ್ರಕರ್ತ ಹಾಗೂ ಸಮಾಜ ಸೇವಕ ಚಂದ್ರ ಮಿಶ್ರಾ ಅವರು ಬೆಗ್ಗರ್ಸ್ ಕಾರ್ಪೊರೇಷನ್ ಸ್ಥಾಪಿಸಿ, ಭಿಕ್ಷುಕರನ್ನು ಉದ್ಯಮಿಗಳಾಗಿ ಪರಿವರ್ತಿಸಲು ನೆರವಾಗುವ ಮೂಲಕ ಅವರಿಗೊಂದು ಸ್ವಾಭಿಮಾನದ ಬದುಕನ್ನು ಕಲ್ಪಿಸಿಕೊಡುತ್ತಿದ್ದಾರೆ
- ಭಾರತದ ಬ್ಯಾಂಕುಗಳು ಲಾಭದ ಹಳಿಗೆ ಮರಳಿದ್ದು 12 ರಾಷ್ಟ್ರೀಕೃತ ಬ್ಯಾಂಕುಗಳು ಕಳೆದ ವಿತ್ತ ವರ್ಷಾಂತ್ಯದಲ್ಲಿ 1,04,649 ಕೋಟಿ ರೂಪಾಯಿ ದಾಖಲೆಯ ಲಾಭಗಳಿಸಿದ್ದರೆ, 21 ಖಾಸಗಿ ಬ್ಯಾಂಕುಗಳು ಬರೋಬ್ಬರಿ 1,26,493 ಕೋಟಿ ರೂಪಾಯಿ ಲಾಭ ಪಡೆದಿವೆ.
- ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತಿಕೂಲ ಹವಾಮಾನದಿಂದಾಗಿ ಅಮರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಪೋಶನಾ ನದಿಯನ್ನು ದಾಟುತ್ತಿದ್ದ ಭಾರತೀಯ ಸೇನೆಯ ಇಬ್ಬರು ಸೈನಿಕರು ಪ್ರವಾಹದಲ್ಲಿ ಕೊಚ್ಚಿಹೋಗಿದ್ದಾರೆ.
- ಅಂಚೆ ಇಲಾಖೆಯ ಬ್ಯಾಂಕ್ ಕಳೆದ ಆರು ವರ್ಷಗಳಲ್ಲಿ ಆರು ಕೋಟಿ ಠೇವಣಿದಾರರ ನೆಲೆಯನ್ನು ಪಡೆದುಕೊಂಡಿದೆ. ಇದರಲ್ಲಿ ಉಳಿತಾಯ ಖಾತೆ ಹೊರತುಪಡಿಸಿ ಮನೆ ಬಾಗಿಲಿನ ಸೇವೆಗಳು ದೊರೆಯುತ್ತವೆ. ಅಂಚೆ ಇಲಾಖೆ ಕಾಲಕ್ಕೆ ತಕ್ಕ ಹಾಗೆ ವಿಕಸನಗೊಳ್ಳುತ್ತಲೇ ಇರುತ್ತದೆ ಎಂದು ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್ ರಾಜೇಂದ್ರಕುಮಾರ್ ಅವರು ಹೇಳಿದ್ದಾರೆ.
- ಅಮೇರಿಕಾ ದೇಶವು ತನ್ನ ರಾಸಾಯನಿಕ ಅಸ್ತ್ರಗಳನ್ನು ಸಂಪೂರ್ಣವಾಗಿ ನಾಶಪಡಿಸಿದೆ, ರಾಸಾಯನಿಕ ಶಸ್ತ್ರಾಸ್ತ್ರಗಳ ಭಯಾನಕತೆಯಿಂದ ಮುಕ್ತವಾದ ಜಗತ್ತಿಗಾಗಿ ಒಂದು ಹೆಜ್ಜೆ ಮುಂದೆ ಇರಿಸಿರುವುದಾಗಿ ಘೋಷಿಸಲು ನಾನು ಹೆಮ್ಮೆಪಡುತ್ತೇನೆ ಎಂದು ಅಧ್ಯಕ್ಷ ಜೋ ಬಿಡೆನ್ ಹೇಳಿದ್ದಾರೆ

## ಓ ದು ಗ ರ ಅ ನಿ ಸಿ ಕೆ . . .




**ಮೊತ್ತ ಪಾವತಿಸಲು ಇಂದಿನ ದಿನಗಳಲ್ಲಿ ಸಾಧ್ಯವೆ? :** ಬ್ಯಾಂಕಿನಿಂದ ಗೃಹ ಸಾಲದ ಪಡೆದವರು ಎಷ್ಟು ಸಾಧ್ಯವೋ ಅಷ್ಟು ಮೊತ್ತವನ್ನು ಡೌನ್‌ಪೇಮೆಂಟ್ ಮಾಡಿದಲ್ಲಿ ಮಾಸಿಕ ಕಂತಿನ ಮೊತ್ತ ಕಡಿಮೆಯಾಗುವುದಲ್ಲದೆ. ದೀರ್ಘಾವಧಿಯಲ್ಲಿ ಬಡ್ಡಿ ರೂಪದಲ್ಲಿ ಬ್ಯಾಂಕಿಗೆ ಪಾವತಿಸುವ ದೊಡ್ಡ ಮೊತ್ತದ ಹಣ ಉಳಿತಾಯವಾಗುತ್ತದೆ ಎಂದು ಕಳೆದ ಸಂಚಿಕೆಯ ಲೇಖನದಲ್ಲಿ ತಿಳಿಸಲಾಗಿದೆ. ಆದರೆ, ಹೆಚ್ಚಿನ ಮೊತ್ತ ಪಾವತಿಸಲು ಇಂದಿನ ದಿನಗಳಲ್ಲಿ ಸಾಧ್ಯವೆ?

**▸▸ ಅಗ್ರಹಾರ ನಾರಾಯಣ ಮೂರ್ತಿ, ಹಾಸನ**

**ನಕಲಿ ನೋಟುಗಳ ಪತ್ತೆ ಹಚ್ಚುವ ಕಷ್ಟ :** ರಿಸರ್ವ್ ಬ್ಯಾಂಕ್ ತನ್ನಲ್ಲಿ ಜಮೆಯಾದ ಹಣದಲ್ಲಿ ನಕಲಿ ನೋಟುಗಳನ್ನು ಪತ್ತೆಹಚ್ಚಿದ ನಂತರ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ನಾಲ್ಕು ಎಫ್‌ಐಆರ್‌ಗಳು ದಾಖಲಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬ್ಯಾಂಕ್ ವ್ಯವಸ್ಥಾಪಕರೇ ನಕಲಿ ನೋಟುಗಳನ್ನು ಪತ್ತೆ ಹಚ್ಚಲಾಗುತ್ತಿಲ್ಲವೆಂದರೆ ಜನಸಾಮಾನ್ಯರಿಂದ ಸಾಧ್ಯವೇ?

**▸▸ ಚಂದ್ರ ಕುಮಾರ್ ಕೆ.ಟಿ., ಚಿಕ್ಕಮಗಳೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.